ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 29.01.2026

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 3 ಮತ್ತು 4 ರವರ ಪರ ಶ್ರೀ. ಸಿ.ಎಸ್.ಎಸ್ ವಕೀಲರಿಂದ**

1. ಮತ್ತಿಘಟ್ಟ ಗ್ರಾಮದಲ್ಲಿ ನಾನು ವಾಸವಾಗಿರುವ ಮನೆಯು ನನ್ನ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಅದು ನನ್ನ ಹೆಂಡತಿಗೆ ಅವರ ತವರು ಮನೆಯವರು ನೀಡಿರುವ ಆಸ್ತಿ ಎಂದು ನುಡಿಯುತ್ತಾರೆ. ನನ್ನ ಹೆಂಡತಿಯ ಹೆಸರು ಶಿವರತ್ನಮ್ಮ ಆಗಿರುತ್ತದೆ. ಶಿವರತ್ನಮ್ಮರವರ ಹೆಸರಿನಲ್ಲಿ ಕೃಷ್ಣರಾಜಪೇಟೆ ತಾಲ್ಲೂಕು, ಕಸಬಾ ಹೋಬಳಿ, ಮತ್ತಿಘಟ್ಟ ಗ್ರಾಮದಲ್ಲಿ ಸರ್ವೇ ನಂಬರ್ 42/2 ರಲ್ಲಿ 10 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಆಸ್ತಿಯು ನನಗೆ ನನ್ನ ತಂದೆಯಿಂದ ಬಂದಿರುವ ಸ್ವತ್ತು ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ದಾಖಲಿಸಿದ ನಂತರ ನಾನು ದಿನಾಂಕ 29.02.2024 ರಂದು ನನ್ನ ಹೆಂಡತಿಯ ಹೆಸರಿಗೆ ಅದನ್ನು ವರ್ಗಾಯಿಸಿರುತ್ತೇನೆ ಎಂದರೆ ಸರಿಯಲ್ಲ.

2. ನನ್ನ ಅಣ್ಣ ಶಂಕರೇಗೌಡರವರು ಅನುದಾನಿತ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಅಣ್ಣ ಶಂಕರೇಗೌಡರವರು ಐಟಂ ನಂಬರ್ 20 ರ ಸ್ವತ್ತನ್ನು ತನ್ನ ಸ್ವಂತ ಆದಾಯದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಮೂರು ಜನ ಮಾರಾಟಗಾರರಿಂದ ಭಾಗ ಭಾಗವಾಗಿ ನನ್ನ ಅಣ್ಣ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ಐಟಂ ನಂಬರ್ 21 ರ ಆಸ್ತಿಯನ್ನು ನನ್ನ ಅಣ್ಣ ಮತ್ತಿಘಟ್ಟ ಗ್ರಾಮದ ವೆಂಕಟೇಗೌಡರ ಮಗ ಕೃಷ್ಣೇಗೌಡರಿಂದ ದಿನಾಂಕ 21.10.2004 ರಲ್ಲಿ

ನೋಂದಾಯಿತ ಕ್ರಯಪತ್ರದ ಮುಖಾಂತರ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯಲ್ಲಿ ನಾನು ನನ್ನ ತಂದೆಯು ನನಗೆ ನೀಡಿದ ಯಾವುದೇ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 5 ಮತ್ತು 6 ನನ್ನ ಅಣ್ಣ ಶಂಕರೇಗೌಡರಿಗೆ ವಿಭಾಗದ ಮುಖಾಂತರ ಬಂದಿದ್ದು ಸದರಿ ಆಸ್ತಿಯ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಿಭಾಗಕ್ಕೆ ಸೇರಿರುವ ಆಸ್ತಿಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳ ಮೇಲೆ ದಾವಾ ದಾಖಲಿಸಿರುವ ಕಾರಣ ನ್ಯಾಯಾಲಯದಲ್ಲಿ ನಾನು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.